ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: OSM

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE 18/12/19

# ದೇಶದ್ರೋಹ ಕೇಸ್ ಮುಷರ್ರಫ್‌ಗೆ ಗಲ್ಲು

ಇಸ್ಲಾಮಾಬಾದ್: ದೇಶದ್ರೋಹ ಪ್ರಕರಣದಲ್ಲಿ ಪಾಕಿಸ್ತಾನದ ಮಾಜಿ ಸರ್ವಾಧಿಕಾರಿ ಪರ್ವೇಜ್ ಮುಷರ್ರಫ್‌ಗೆ(76) ವಿಶೇಷ ಕೋರ್ಟ್ ಗಲ್ಲು ಶಿಕ್ಷೆ ವಿಧಿಸಿ ಮಂಗಳವಾರ ಆದೇಶ ನೀಡಿದೆ. ಈ ಮೂಲಕ ಪಾಕಿಸ್ತಾನದ ಇತಿಹಾಸದಲ್ಲೇ ನ್ಯಾಯಾಲಯವೊಂದರಿಂದ ಮರಣದಂಡನೆ ರೀತಿಯ ಅತ್ಯಂತ ದೊಡ್ಡ ಶಿಕ್ಷೆಗೆ ಗುರಿಯಾದ ಮೊದಲ ನಿವೃತ್ತ ಸೇನಾಧಿಕಾರಿ ಎಂಬ ಕುಖ್ಯಾತಿಗೆ ಅವರು ಪಾತ್ರರಾಗಿದ್ದಾರೆ.



2007ರ ನ. 3ರಂದು ದೇಶದ ಮೇಲೆ ಸಂವಿಧಾನ ಬಾಹಿರವಾಗಿ ತುರ್ತು ಪರಿಸ್ಥಿತಿ ಹೇರಿದ ಹಿನ್ನೆಲೆಯಲ್ಲಿ ಅವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿತ್ತು. ಪೇಶಾವರ ಹೈಕೋರ್ಟ್‌ನ ಮುಖ್ಯ ನ್ಯಾ. ವಕಾರ್ ಅಹ್ಮದ್ ಸೇಠ್ ನೇತೃತ್ವದ ಪೀಠ ಸುದೀರ್ಘ ಅವಧಿಯಿಂದ ವಿಚಾರಣೆ ನಡೆಸಿ, ಈ ಆದೇಶ ನೀಡಿದೆ. ನ.19ರಂದು ಪ್ರಕರಣದ ಅಂತಿಮ ಹಂತದ ವಿಚಾರಣೆ ನಡೆಸಿದ್ದ ನ್ಯಾಯಪೀಠ, ತೀರ್ಪು ಕಾಯ್ದಿರಿಸಿತ್ತು. ಈ ನಡುವೆ ತೀರ್ಪನ್ನು ಮತ್ತಷ್ಟು ಸಮಯ ಮುಂದೂಡುವಂತೆ ಪರ್ವೇಜ್ ಮುಷರ್ರಫ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಪೀಠ ತಿರಸ್ಕರಿಸಿತ್ತು. ತೀರ್ಪಿಗೆ ಸಂಬಂಧಿಸಿದಂತೆ ವಿಡಿಯೋ ಮೂಲಕ ಪ್ರತಿಕ್ರಿಯಿಸಿದ್ದು, 'ನನ್ನ ವಿರುದ್ಧದ ದೇಶದ್ರೋಹದ ಪ್ರಕರಣವೇ ನಿರಾಧಾರ' ಎಂದು ಹೇಳಿದ್ದಾರೆ.